ಖಚಿತವಾಗಿ ಹೇಳಲಿಲ್ಲ. ಇದಲ್ಲದೇ ಕರ್ನಾಟಕದಲ್ಲಿ ಇನ್ನೂ ಕೆಲವು ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ಆ ಪ್ರಾಜೆಕ್ಟ್‌ಗಳೆಲ್ಲಾ ಪ್ರಾರಂಭವಾದರೆ ರೈತರ ಬೇಡಿಕೆಗಳು ಏನಿದೆ ಅದರ ಪ್ರಕಾರ ವಿದ್ಯುಚ್ಛಕ್ತಿ ಕೊರತೆಯೆಲ್ಲಾ ಸರಿಯೋಗುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ನಾವು ನಮ್ಮ ರಾಜ್ಯದಲ್ಲಿ ಎಷ್ಟೇ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದರೂ ಕೂಡ ಯಾವಾಗಲೂ ಅದರ ಬೇಡಿಕೆ ಇದ್ದೇ ಇರುತ್ತದೆ. ನಮ್ಮ ಬೇಡಿಕೆಗಳ ಪ್ರಕಾರ ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿಯನ್ನು ಪ್ರೊಡ್ಯೂಸ್ ಮಾಡಿದರೆ ಒನೇ ಆಫ್‌ವಾ ಔನೇ ಪ್ಲಾನ್‌ನಲ್ಲಿ ನಮಗೆ ಬೇಡಿಕೆಗಳೆಲ್ಲವೂ ಪೂರ್ಣಗೊಗಬಹುದು. ನಮಗೆ ಪ್ರತಿವರ್ಷ ಎಷ್ಟು ವಿದ್ಯುಚ್ಛಕ್ತಿ ಬೇಕಾಗುತ್ತದೆ ಎಂದರೆ ೧೦೫೦ ಮೆಗವಾಟ್‌ಗಳಿಂದ ೨೦೨೦ ಮೆಗವಾಟ್‌ಗಳಷ್ಟು ಬೇಕಾಗುತ್ತದೆ. ನಾವು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಾ ಇರಬೇಕು. ಹಾಗೆ ಉತ್ಪತ್ತಿ ಮಾಡಿದ್ದನ್ನು ತಡೆದು ಹಿಡಿದಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದನ್ನು ಸರಬರಾಜು ಮಾಡುತ್ತಾ ಇರಬೇಕು. ನಮ್ಮ ಮಾನ್ಯ ಸದಸ್ಯರು ಆಗಲೇ, ನೆರೆಯ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ತರಿಸಿಕೊಂಡಿದ್ದಾರೆಯೋ ಅಥವಾ ಇಲ್ಲವೋ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಈ ಸದನದಲ್ಲಿ ನಾಲ್ಕೈದು ಬಾರಿ ಆ ವಿಚಾರದಲ್ಲಿ ಹೇಳಿದ್ದೇನೆ ; ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರದವರು ನಮಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಕೇರಳದಿಂದ ನಮಗೆ ಹೆಚ್ಚಿನ ವಿದ್ಯುಚ್ಛಕ್ತಿ ಬರುತ್ತಾ ಇದೆ.

MR. DEPUTY SPEAKER.—Question No. 561 is held over.

D.P.A.P. Programme in Dharwar District

983 SRI M. M. MALAGI (Byadagi) and SRI M. S. KATAGI (Kundgol)—Will the Minister for Rural Development and Panchayat Raj be pleased to state.—

(a) the names of the taluks included under the D.P.A.P. in Dharwar district ;

(b) the number of taluks which were not included under the D.P.A.P. ;

(c) whether Ranibennur and Haveri taluks have been included under the D.P.A.P. If so, the reasons for not including the Byadagi taluk which is more backward than the other two taluks ;

(d) whether the Government would give an assurance for inclusive of Byadagi taluk atleast now in the D.P.A.P. Scheme from tne year 1981-82 ?

SRI B. RAMAIAH.(Minister for Rural Development and Panchayat Raj).—

(a) (1) Haveri, (2) Kundgol, (3) Mundargi, (4) Ranibennur and (5) Ron taluks were included under D.P.A.P. Scheme aided by the Central Government and (1) Naragund (2) Sirahatti taluks were included under the State D.P.A.P. Scheme aided by the State Government.

(b) 10.

(c) Yes. The Central Government was taking final decision about the inclusion of any taluks under the D.P.A.P. Scheme. The Expert Committee had identified 74 taluks. In that list Byadagi taluk was not included.

(d) Recommendation has not been sent to the Central Government on 2-8-1980 for inclusion Byadagi taluk under D.P.A.P. Scheme.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾವು ಒಂದು ವರ್ಷದ ಹಿಂದೆಯೇ ಈ ಪ್ರಶ್ನೆಯನ್ನು ಕೇಳಿದ್ದೆವು. ಈಗ ಅದಕ್ಕೆ ಉತ್ತರ ಬರುತ್ತಾ ಇದೆ. ಸರ್ಕಾರದವರು ಕೊಟ್ಟಿರತಕ್ಕಂಥ ಉತ್ತರ ಏನಿದೆ ಅದು ತಪ್ಪಾಗಿದೆ.

ಶ್ರೀ ಬೇಗಾನೆ ರಾಮಯ್ಯ.—ತಪ್ಪೇನೂ ಆಗಿಲ್ಲ. ಆಗ ಧಾರವಾಡದ ೫ ತಾಲ್ಲೂಕುಗಳು ಈ ಡಿ. ಪಿ. ಎ. ಪಿ. ಪ್ರೋಗ್ರಾಂನಲ್ಲಿ ಸೇರಿದ್ದವು, ಈಗ ನಾವು ೯ ತಾಲ್ಲೂಕುಗಳನ್ನು ಸೇರಿಸಿದ್ದೇವೆ. ಈ ಡಿ.ಪಿ.ಎ.ಪಿ.ಯಲ್ಲಿ ನವಲಗುಂದ ತಾಲ್ಲೂಕನ್ನು ಬಿಟ್ಟರೆ ಎಲ್ಲಾ ತಾಲ್ಲೂಕುಗಳು ಸೇರಿವೆ. ಮಾನ್ಯ ಸದಸ್ಯರು ಈ ಬ್ಯಾಡಗಿ ತಾಲ್ಲೂಕು ಸೇರಿದೆಯೇ ಎಂದು ಕೇಳಿದ್ದಾರೆ. ಬ್ಯಾಡಗಿ ತಾಲ್ಲೂಕು ಕೂಡ ಅದರಲ್ಲಿ ಸೇರಿದೆ. ಒಟ್ಟು ೧೪ ತಾಲ್ಲೂಕುಗಳು ಸೆಂಟ್ರಲ್ ಸೆಕ್ಟಾರಿನಲಿ ಸೇರಿವೆ. ನರಗುಂದ ಮಾತ್ರ ಸ್ಟೇಟ್ ಸೆಕ್ಟಾರ್‌ನಲ್ಲಿ ಸೇರಿದೆ. ಒಟ್ಟು ೧೫ ತಾಲ್ಲೂಕುಗಳು ಇದರಲ್ಲಿ ಒಳಗೊಂಡಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇಡೀ ಬಿಜಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನೂ ಈ ಡಿ.ಪಿ.ಎ.ಪಿ. ಕಾರ್ಯಕ್ರಮದಲ್ಲಿ ತೆಗೆದುಕೊಂಡಿದ್ದಾರೆ. ಧಾರವಾಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನೂ ಇದರಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಏನು ತೊಂದರ ಇದೆ ಬಿಜಾಪುರದಲ್ಲಿ ತೆಗೆದುಕೊಂಡಿರುವಂತೆ ಧಾರವಾಡದ ಎಲ್ಲಾ ತಾಲ್ಲೂಕುಗಳನ್ನೂ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ಏಕೆಂದರೆ ಎರಡೆರಡು ತಾಲ್ಲೂಕುಗಳನ್ನು ತೆಗೆದುಕೊಂಡರೆ ಸರಿಹೋಗುವುದಿಲ್ಲ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾವು ಆಗಾಗ ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸು ಮಾಡಿಕೊಂಡು ಬಂದಿದ್ದೇವೆ. ಬಹುಶಃ ಇದರಲ್ಲಿ ಮಾನ್ಯ ಸದಸ್ಯರಾದ ಕಟಗಿ ಮತ್ತು ವಾಳಗಿಯವರು ಈ ಬಗ್ಗೆ ಕೇಳಿದಂತಹ ಕಾಲದಲ್ಲಿ ನಾವು ಶಿಫಾರಸ್ಸು ಮಾಡಿದ್ದೆವು. ಅದು ಈಗ ಬಂದಿದೆ. ಇದರಲ್ಲಿ ಕೆಲವು ನಿಬಂಧನೆಗಳು ಇದೆ. ಆ ನಿಬಂಧನೆಗಳ ಪ್ರಕಾರ ಅದರಲ್ಲಿ ಸೇರಿಸಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಇಡೀ ಬಿಜಾಪುರ ಜಿಲ್ಲೆಯನ್ನೇ ಈ ಡಿಪಿಎಪಿ ಯಲ್ಲಿ ತೆಗೆದುಕೊಂಡಿದ್ದಾರೆ. ಅದೇ ರೀತಿ ಈ ಧಾರವಾಡ ಜಿಲ್ಲೆಯನ್ನೂ ಏತಕ್ಕೆ ತೆಗೆದು ಕೊಳ್ಳಬಾರದು ಎಂದು ಕೇಳಿದ್ದಾರೆ. ಅವರು ಹೇಳಿದಂತಹ ಪಾಯಿಂಟ್ ಬಗ್ಗೆ ನಾನು ಸ್ಟಡೀ ಮಾಡಿ ಆ ಬಗ್ಗೆ ಸೂಕ್ತವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆ. ಇದರಲ್ಲಿ ಯಾವ ರೀತಿ ಮಾಡುತ್ತೇವೆ ಎಂದರೆ, ಆ ತಾಲ್ಲೂಕಿನಲ್ಲಿ ಇರತಕ್ಕಂಥ ಒಟ್ಟು ಬಿತ್ತನೆಯ ಪ್ರದೇಶ, ನೀರಾವರಿಗೆ ಒಳಪಡಿಸಿದಂತಹ ಪ್ರದೇಶದ ವಿಸ್ತೀರ್ಣ ಮತ್ತು ಆ ತಾಲ್ಲೂಕಿನ ಮಳೆಯ ಪ್ರಮಾಣವನ್ನು ನೋಡಿಕೊಂಡು ಮತ್ತು ಆ ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಪ್ರಮಾಣವನ್ನು ನೋಡಿಕೊಂಡು ಈ ಎಲ್ಲಾ ಕ್ರೈಟೀರಿಯಾಗಳ ಮೇಲೆ ಅಂತಹ ತಾಲ್ಲೂಕುಗಳನ್ನು ನಾವು ಡಿಪಿಎಪಿ ಯಲ್ಲಿ ತೆಗೆದುಕೊಳ್ಳುತ್ತೇವೆ. ಧಾರವಾಡ ಜಿಲ್ಲೆಯಲ್ಲಿ ನವಲಗುಂದ ಮತ್ತು ಧಾರವಾಡ ಈ ಎರಡು ತಾಲ್ಲೂಕುಗಳು ಮಾತ್ರ ಸೇರ ಬೇಕಾದ್ದಿದೆ. ಈ ಬಗ್ಗೆ ನಾವು ವ್ಯಾಪಕವಾಗಿ ಸಮೀಕ್ಷೆ ನಡೆಸುತ್ತೇವೆ. ಆ ತಾಲ್ಲೂಕುಗಳನ್ನೂ ಈ ಡಿಪಿಎಪಿ ಯಲ್ಲಿ ಸೇರಿಸುವುದಕ್ಕೆ ಬರುತ್ತದೆ ಎಂದು ಕಂಡುಬಂದರೆ ಖಂಡಿತವಾಗಿ ಅವುಗಳನ್ನು ಅದರಲ್ಲಿ ಸೇರಿಸಬಹುದು. ಅದರಲ್ಲಿ ಏನೂ ತೊಂದರೆಯಿಲ್ಲ.

ಶ್ರೀ ಎಂ.ಎಂ. ಮಾಲಗಿ.—ಮಾನ್ಯ ಅಧ್ಯಕ್ಷರೇ, ನಾನು ಹೋದಸಾರಿ ಕೇಳಿದ ಪ್ರಶ್ನೆ ಈಗ ಬಂದಿದೆ. ಮಾನ್ಯ ಮಂತ್ರಿಯವರು ಈಗತಾನೇ ಈ ನಮ್ಮ ಬ್ಯಾಡಗಿ ತಾಲ್ಲೂಕನ್ನೂ ಈ ಡಿಪಿಎಪಿ ಯಲ್ಲಿ ಅಳವಡಿಸಿ ಕೊಂಡಿದ್ದಾರೆ ಎಂದು ಹೇಳಿದ್ದಾರೆ. ಹಾಗೆಯೇ ಈ ನವಲಗುಂದ ಮತ್ತು ಧಾರವಾಡ ತಾಲ್ಲೂಕು ಗಳನ್ನು ಈ ಡಿಪಿಎಪಿ ಯಲ್ಲಿ ಏತಕ್ಕೆ ಸೇರಿಸಿಕೊಳ್ಳಬಾರದು ಎಂದು ಕೇಳುತ್ತೇನೆ. ಅಲ್ಲದೆ ಈಗಾಗಲೇ

ಯಾವ್ಯಾವ ತಾಲ್ಲೂಕುಗಳಲ್ಲಿ ಈ ಡಿಪಿಎಪಿ ಮಂಜೂರಾತಿಯಾಗಿದೆ ಅಲ್ಲಿ ಕೆಲಸ ಕಾರ್ಯಗಳನ್ನು ಆದಷ್ಟು ಶೀಘ್ರವಾಗಿ ಶುರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ನವಲಗುಂದ ಮತ್ತು ಧಾರವಾಡತಾಲ್ಲೂಕುಗಳ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಯಾವ್ಯಾವ ತಾಲ್ಲೂಕುಗಳಿಗೆ ಈ ಡಿಪಿಎಪಿ ಮಂಜೂರಾಗಿದೆ ಅಲ್ಲಿ ಕೆಲಸ ಕಾರ್ಯಗಳು ಶುರುವಾಗಿಯೇ ಆಗುತ್ತವೆ.

ಶ್ರೀ ಜಿ. ರಾಜುಗೌಡ.—ತಾವು ಈ ೧೯೮೦-೮೧ರಲ್ಲಿ ಎಷ್ಟು ತಾಲ್ಲೂಕುಗಳನ್ನು ಈ ಡಿಪಿಎಪಿಯಲ್ಲಿ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸು ಮಾಡಿದ್ದೀರಿ ? ಬಹುಶಃ ನೀವು ಯಾವ್ಯಾವ ತಾಲ್ಲೂಕುಗಳನ್ನು ಶಿಫಾರಸ್ಸು ಮಾಡಿದ್ದೀರೋ ಆ ತಾಲ್ಲೂಕುಗಳು ಅದಕ್ಕೆ ಅರ್ಹತೆಯಂತ್ತು ಹೊಂದದೇ ಇರತಕ್ಕಂಥ ತಾಲ್ಲೂಕುಗಳು ಎನ್ನತಕ್ಕಂಥ ವಿಚಾರ ನಿಜವೇ? ಆ ಎಲ್ಲಾ ತಾಲ್ಲೂಕುಗಳೂ ಅರ್ಹತೆಯನ್ನು ಹೊಂದಿರತಕ್ಕಂಥ ತಾಲ್ಲೂಕುಗಳು ಎನ್ನುವುದಾದರೆ ಅಂತಹ ತಾಲ್ಲೂಕುಗಳಲ್ಲಿ ಯಾವುದಾದರೂ ತಾಲ್ಲೂಕುಗಳನ್ನು ಕೇಂದ್ರ ಸರ್ಕಾರದವರು ಈ ಡಿಪಿಎಪಿ ಯಲ್ಲಿ ಸೇರಿಸುವುದನ್ನು ಬಿಟ್ಟಿದ್ದರೆ ಅದನ್ನು ನೀವು ಸ್ಟೇಟ್ ಸೆಕ್ಟಾರ್‌ನಲ್ಲಿ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬೇಗಾನೆ ರಾಮಯ್ಯ.—ನಾವು ಸುಮಾರು ೪೩ ತಾಲ್ಲೂಕುಗಳನ್ನು ರೆಕ್‌ಮೆಂಡ್ ಮಾಡಿದ್ದೇವೆ ಮೊನ್ನೆ ದಿವಸ ನಾನು ಈ ಮನೆಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡುವಾಗ ಈ ಡಿಪಿಎಪಿ ಬಗ್ಗೆ ವಿವರವಾಗಿ ಹೇಳಿದ್ದೇನೆ. ಆದರಲ್ಲಿ ೨೩ ತಾಲ್ಲೂಕುಗಳು ಮಂಜೂರಾತಿ ಪಡೆದು ಬಂದಿವೆ. ಇಡೀ ಭರತ ಖಂಡದಲ್ಲೆ ನಮ್ಮ ಕರ್ನಾಟಕ ರಾಜ್ಯಕ್ಕೆ ಆದರಲ್ಲಿ ಹೆಚ್ಚು ಪಾಲು ಬಂದಿದೆ ಯೆಂದು ಅವರು ಹೇಳಿದ್ದಾರೆ. ಉತ್ತರ ಪ್ರದೇಶಕ್ಕೆ ಇದು ಸಿಕ್ಕಿಲ್ಲ. ನಾವು ಕೇಂದ್ರ ಸರ್ಕಾರದವರ ಮೇಲೆ ಒತ್ತಡವನ್ನು ಹಾಕಿ ಅವರ ಮನವೊಲಿಸಿಕೊಂಡು ಒಟ್ಟು ೨೩ ತಾಲ್ಲೂಕುಗಳಿಗೆ ಮಂಜೂರಾತಿಯನ್ನು ತಂದಿದ್ದೇವೆ. ನಿಮ್ಮ ತಾಲ್ಲೂಕನ್ನು ಇದರಲ್ಲಿ ಸೇರಿಸಿಕೊಳ್ಳಬೇಕೆಂದು ನೀವು ಹೇಳುತ್ತಿದ್ದೀರಿ. ಇದರಲ್ಲಿ ಇರತಕ್ಕಂಥ ನಿಬಂಧನೆಗಳನ್ನು ಆದಕ್ಕೂ ಅನ್ವಯಿಸಿ, ನಿಮ್ಮ ತಾಲ್ಲೂಕು ಆದರಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಾನು ಪರೀಕ್ಷೆ ಮಾಡಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ನನ್ನ ಪ್ರಶ್ನೆ ಇಷ್ಟೆ, ತಾವು ೪೩ ತಾಲ್ಲೂಕುಗಳನ್ನು ಶಿಫಾರಸ್ಸು ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಆ ೪೩ ತಾಲ್ಲೂಕುಗಳೂ ಡಿಪಿಎಪಿ ಯಲ್ಲಿ ತೆಗೆದುಕೊಳ್ಳುವುದಕ್ಕೆ ಅರ್ಹವಾಗಿದೆ ಎಂಬುದು ನಿಮ್ಮ ಅರ್ಥವೇ? ಹಾಗಾದರೆ ಉಳಿದ ತಾಲ್ಲೂಕುಗಳನ್ನೂ ಇದರಲ್ಲಿ ಸೇರಿಸುತ್ತೀರಾ ?

ಶ್ರೀ ಬೇಗಾನೆ ರಾಮಯ್ಯ.—ಅದನ್ನು ಪರಿಶೀಲನೆ ಮಾಡಬೇಕೆಂದು ನಾನು ಆಗಲೇ ಹೇಳಿದ್ದೇನೆ. ಇದರಲ್ಲಿ ರಾಜ್ಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವು ತಾಲ್ಲೂಕುಗಳು ಇವೆ, ಹಾಗೆಯೇ ಕೇಂದ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವು ತಾಲ್ಲೂಕುಗಳು ಇವೆ. ಈ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡುವಾಗ ಇದನ್ನೆಲ್ಲಾ ವಿವರವಾಗಿ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ. ಜಯದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಆಗಲೇ ಈ ಬಗ್ಗೆ ಹೇಳುತ್ತಾ, ಆಯಾ ತಾಲ್ಲೂಕುಗಳನ್ನು ಈ ಡಿಪಿಎಪಿಯಲ್ಲಿ ತೆಗೆದುಕೊಳ್ಳಬೇಕಾದರೆ ಇರತಕ್ಕಂಥ ಮೂರು ಕಂಡಿಷನ್‌ಗಳನ್ನು ಹೇಳಿದ್ದಾರೆ. ನಮ್ಮ ಮೈಸೂರು ತಾಲ್ಲೂಕಿನಲ್ಲಿ ಆವರೇಜ್ ೧೬ ಇಂಚು ಮಳೆಯಾಗುತ್ತಿದೆ. ಆ ಜನರ ಕಷ್ಟಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಆ ಜನರ ಕಷ್ಟಗಳನ್ನು ಅರಿತು ಆ ತಾಲ್ಲೂಕನ್ನು ಈ ಡಿಪಿಎಪಿ ಯಲ್ಲಿ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಯವರು ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಈಗಾಗಲೇ ಮೈಸೂರು ಜಿಲ್ಲೆಗೆ ೧೯ ತಾಲ್ಲೂಕುಗಳಲ್ಲಿ ಈ ಎನ್ ಆರ್ ಡಬ್ಲ್ಯೂ ಸ್ಕೀಮ್‌ನಲ್ಲಿ ಸೇರಿಸಿ ಕೊಟ್ಟಿದ್ದೇವೆ. ಇಷ್ಟೊಂದು ಜಾಸ್ತಿಯಾಗಿ ಕೊಟ್ಟಿರುವುದು ಮೈಸೂರು ಜಿಲ್ಲೆಗೆ ಮಾತ್ರ. ಆದರೆ ನಾವು ಬೇರೆ ತಾಲ್ಲೂಕುಗಳಿಗೆ ಕಡಿಮೆ ಕೊಟ್ಟಿದ್ದೇವೆ. ಮತ್ತು ಡಿಪಿಎಪಿ ಸ್ಕೀಮ್‌ನಲ್ಲಿ ಈ ಮೈಸೂರು ಜಿಲ್ಲೆ ಬರುವುದಾದರೆ ಅದನ್ನು ಪರಿಗಣಿಸಿ ಸೇರಿಸಬೇಕೆಂಬ ಕಳಕಳಿ ಸರ್ಕಾರಕ್ಕೂ ಕೂಡ ಇದೆ.

ಶ್ರೀ ಟಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ ಕೋಲಾರ ಚಿತ್ರದುರ್ಗ ತುಮಕೂರು ಮುಂತಾದ ಕಡೆಗಳಲ್ಲಿ ಬರಗಾಲ ಪ್ರದೇಶ ಇದೆಯೆಂದು ಸರ್ಕಾರಕ್ಕೆ ಗೊತ್ತಾಗಿದೆ. ಆದ್ದರಿಂದ ಈ ಕಡೆಗಳಲ್ಲಿ ಡಿ.ಪಿ.ಎ.ಪಿ ಸ್ಕೀಮನ್ನು ವ್ಯಾಪಕವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ? ಮತ್ತು ಕೇಂದ್ರ ಸರ್ಕಾರದ ನಾರಂಸ್‌ಗಳಿಗೆ ಈ ಮೂರು ನಾಲ್ಕು ಜಿಲ್ಲೆಗಳು ಬರುತ್ತವೆ. ಆದ್ದರಿಂದ ಇವುಗಳನ್ನು ಡಿ.ಪಿ.ಎ.ಪಿ. ಸ್ಕೀಮ್‌ನಲ್ಲಿ ಸೇರಿಸುವುದಕ್ಕೆ ಶಿಫಾರಸ್ ಮಾಡಿ ಕಳುಹಿಸಿಕೊಡುತ್ತೀರಾ?

ಶ್ರೀ ಬಿ. ರಾಮಯ್ಯ.—ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಸಹ ನನ್ನ ಜೊತೆಯಲ್ಲಿ ಮಾತನಾಡಿ ಹೇಳಿದ್ದಾರೆ ಮತ್ತು ಮೊನ್ನೆ ಮಾತನಾಡುವಾಗ ಸಹ ಇದರ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಮ್ಮ ಆರ್ಥಿಕ ಸಚಿವರು ಇಲ್ಲಿಯೇ ಇದ್ದಾರೆ ಅವರು ಹಣವನ್ನು ಕೊಟ್ಟರೆ ಈ ಮೂರು ನಾಲ್ಕು ಜಿಲ್ಲೆಗಳನ್ನು ಸೇರಿಸಬೇಕೆಂಬ ಕಳಕಳಿ ನನಗೂ ಇದೆ. ಆದ್ದರಿಂದ ಈ ಜಿಲ್ಲೆಗಳ ವರದಿಯನ್ನು ತರಿಸಿಕೊಂಡು ಆ ನಂತರ ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.— ಮಾನ್ಯ ಅಧ್ಯಕ್ಷರೇ ಈ ಜಿಲ್ಲೆಗಳನ್ನು ಪೂರ್ತಿಯಾಗಿ ಸೇರಿಸಬೇಕು.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ.ಎಸ್. ಕಟ್ಟಿ.—ಮಾನ್ಯ ಅಧ್ಯಕ್ಷರೇ, ಧಾರವಾಡ ಮತ್ತು ನವಲಗುಂದ ಈ ಎರಡು ಕ್ಷೇತ್ರಗಳನ್ನು ಈ ಒಂದು ಯೋಜನೆಯಲ್ಲಿ ಮೊದಲೇ ಸೇರಿಸಬೇಕಾಗಿತ್ತು. ಆದರೆ ಈ ಎರಡು ಕ್ಷೇತ್ರಗಳನ್ನು ತಾವು ಕಡೆಯಲ್ಲಿ ಸೇರಿಸಿದ್ದೀರಿ ಇದಕ್ಕೆ ಕಾರಣವೇನು?

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಧಾರವಾಡ ಜಿಲ್ಲೆ ಇದು ಪಶ್ಚಿಮ ಘಟ್ಟಗಳಲ್ಲಿ ಬರುತ್ತದೆ. ಆದ್ದರಿಂದ ಈ ಒಂದು ಯೋಜನೆ ಇಲ್ಲಿ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಇಲ್ಲಿ ಇರಿಗೇಷನ್ ತೆಗೆದುಕೊಂಡು ಮಾಡಬೇಕೆಂದು ಹೇಳಿ ಸರ್ಕಾರ ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಈ ಎರಡು ಕ್ಷೇತ್ರಗಳು ಕೇಂದ್ರ ಸರ್ಕಾರದ ನಾರಮ್ಸ್‌ನಲ್ಲಿ ಬರುವುದಿಲ್ಲ. ಈ ಕೇಂದ್ರ ಸರ್ಕಾರದ ನಾರಮ್ಸ್ ಒಳಗಡೆ ಬಂದರೆ ಮಾತ್ರ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದಲ್ಲಿ.....

MR. DEPUTY SPEAKER.—Hon'ble Minister has already replied. You please send a separate notice I will admit it.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ನಾನು ನೋಟೀಸ್ ರೆಡಿಯಾಗಿ ಬರೆದುಕೊಂಡು ಬಂದಿದ್ದೇನೆ.

ಶ್ರೀ ಮಲ್ಲಿಕಾರ್ಜುನಪ್ಪ.—ಮಾನ್ಯ ಅಧ್ಯಕ್ಷರೇ ಧಾರವಾಡ ಜಿಲ್ಲೆಯಲ್ಲಿ ಸುಮಾರು ೧೦೬ ತಾಲ್ಲೂಕುಗಳು ಇವೆ. ಈ ತಾಲ್ಲೂಕುಗಳಲ್ಲಿ ನೀರಾವರಿ ಸೌಕರ್ಯಗಳು ಇಲ್ಲ. ಅಲ್ಲಿರುವಂತಹ ಬಡಜನತೆಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಜಿಲ್ಲೆಯನ್ನು ಈ ಡಿಪಿಎಪಿ ಸ್ಕೀಮ್‌ನಲ್ಲಿ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ನನ್ನ ಜಿಲ್ಲೆ ಬಹಳ ಬರಗಾಲ ಪೀಡಿತ ಪ್ರದೇಶಕ್ಕೆ ಒಳಗಾಗಿದೆ. ಅಲ್ಲಿ ರೈತರು ಮಳೆ ಬೆಳೆ ಇಲ್ಲದ ತೊಂದರೆಗೆ ಒಳಗಾಗಿದ್ದಾರೆ.

ಉಪಾಧ್ಯಕ್ಷರು.—ತಾವು ಇದನ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿಕೊಡಿ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ, ಅಲ್ಲಿರುವಂತಹ ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ತಮ್ಮ ಹೊಲ ಮತ್ತು ಗದ್ದೆಗಳಲ್ಲಿ ಬೀಜವನ್ನು ಬಿತ್ತನೆ ಮಾಡಿದ್ದಾರೆ. ಈಗ ಮಳೆ ಇಲ್ಲದೆ ಪೈರು ಎಲ್ಲಾ ಕೆಂಪಾಗಿದೆ. ಮತ್ತೆ ಕೆಲವರು ನಾವು ಅವಲಕ್ಕಿ ಮಾಡಿಕೊಂಡು ತಿನ್ನಬೇ ಎಂತಹ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡುತ್ತಾರೆಯೇ ?

ಶ್ರೀ ಮಲ್ಲಿಕಾರ್ಜುನಪ್ಪ.—ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ಜಿಲ್ಲೆಯ ಕಡೂರು ಅನ್ನು ಯಾವಾಗ ಸೇರಿಸುತ್ತೀರಿ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಚಿಕ್ಕಮಂಗಳೂರು ಜಿಲ್ಲೆಯ ಕಡೂರು ಅನ್ನು ಕೇಂದ್ರ ಸರ್ಕಾರದವರು ಕೈ ಬಿಟ್ಟಿದ್ದಾರೆ. ಆದ್ದರಿಂದ ಈ ತಾಲ್ಲೂಕುಗಳನ್ನು ಸರ್ಕಾರದವರು ಸ್ಪೇಟ್ ಸೆಕ್ಟರ್‌ನಲ್ಲಿ ಲಕ್ಕೆ ಹೋಬಳಿ ಕಡೂರು ಅನ್ನು ಈ ಯೋಜನೆಯಲ್ಲಿ ಸೇರಿಸಿದ್ದೇವೆ. ಮತ್ತು ತರೀಕೆರೆಯನ್ನು ಸಹ ಸೇರಿಸಬೇಕೆಂಬ ಆಸೆ ನನಗೆ ಇದೆ. ಆದ್ದರಿಂದ ಸರ್ಕಾರದವರು ಇದನ್ನು ಪರಿಶೀಲನೆ ಮಾಡಿ ಸೇರಿಸುತ್ತೇವೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ತರೀಕೆರೆ ಯಾವ ನಾರಮ್ಸ್‌ನಲ್ಲಿ ಬರುತ್ತದೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಡಬೇಕು. ಕಾರಣವೇನೆಂದರೆ ಈಗ ನನ್ನ ಕ್ಷೇತ್ರ ಶೃಂಗೇರಿ ಇದನ್ನು ನಾನು ಡಿಪಿಎಪಿ ಯಲ್ಲಿ ಸೇರಿಸುವುದಕ್ಕೆ ಆಗಂತ್ತದೆಯೇ. ಆದರೆ ಅಲ್ಲಿ ಜನರಿಗೆ ತೊಂದರೆಯಾಗಿದ್ದರೆ ಎನ್.ಆರ್.ಇ.ಪಿ. ಸ್ಕೀಮ್‌ನಲ್ಲಿ ಸೇರಿಸಬಹುದು.

Water Supply Connection for Domestic and non Domestic in Bangalore City.

333 SRI M. CHANDRASHEKAR (Jayanagar).—Will the Minister for Housing and Urban Development be pleased to state :

(a) the total number of (i) domestic and (ii) non domestic water supply connections in Bangalore City under the jurisdiction of Bangalore Water Supply and Sewerage Board ;

(b) the amount that would be realised by the Bangalore Water Supply and Sewerage Board from newly levied minimum deposit on (i) domestic and (ii) non-domestic connections :

(c) whether the Government intend to treating the deposit amount as loan paid from the consumer and pay nominal interest on the deposit collected as this is a heavy financial burden on the consumer ;

SRI DHARAM SINGH (Minister for Housing and Urban Development).—

(a) The Total number of (i) domestic connection is (1,21,054),

(ii) non-domestic connection (21,888).

(iii) The above figures are upto end of April 1982.

(b) (i) Domestic connection Rs. 35 lakhs·

(ii) non-domestic connection Rs. 256 lakhs approximately.

(iii) Corporation of the City of Bangalore Rs. 78 lakhs.

(c) The deposit is not contemplated to be treated as loan since pproximately 10% of the total estimated receipts are from domestic aonsumers.